<u>ಸಿ.ಸಿ. **1577/2019**</u>
<u>ಪಿಡಬ್ಲೂಃ **01**</u>

ದಿನಾಂಕಃ **20-05-2023** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಆರೋಪಿ ಪರ ವಕೀಲರರಿಂದ :-**

ನಾನು 8 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದು, ಕನ್ನಡ ಓದಲು, ಬರೆಯಲು ಬರುತ್ತದೆ. ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆ. ನಾನು ಹೆಚ್ ಗೋಪಗೊಂಡನಹಳ್ಳಿಯ ನಿವಾಸಿಯಾಗಿರುತ್ತೇನೆ.ಆರೋಪಿಯು ನ್ಯಾಮತಿ ತಾಲ್ಲೂಕಿನ ಯರಗನಾಳ್ ಗ್ರಾಮದಲ್ಲಿ ವಾಸವಾಗಿದ್ದಾರೆ. ಆರೋಪಿಯು ನನ್ನ ಸಂಬಂಧಿಯಲ್ಲ. ಅವರು ನನಗೆ ಸುಮಾರು 20 ವರ್ಷಗಳಿಂದ ಪರಿಚಯವಿದ್ದಾರೆ. ನನಗೆ ಈಗ 40 ವರ್ಷ ವಯಸ್ಸಾಗಿದೆ. ಆರೋಪಿಗೆ 55 ವರ್ಷ ವಯಸ್ಸಾಗಿದೆ. ನನ್ನ ಮತ್ತು ಆರೋಪಿಯ ಗ್ರಾಮಗಳು ಬೇರೆ ಬೇರೆಯಾಗಿರುವುದರಿಂದ ನನಗೆ ಮತ್ತು ಆರೋಪಿಗೆ ಯಾವುದೇ ರೀತಿಯ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಜುಲೈ ಮೊದಲನೇ ವಾರದಂದು ನಮ್ಮ ಮನೆಗೆ ಬಂದು 10 ಲಕ್ಷ ಹಣವನ್ನು ಸಾಲವಾಗಿ ನೀಡುವಂತೆ ಕೇಳಿರುತ್ತಾರೆ. ನಿರ್ದಿಷ್ಟವಾದ ದಿನಾಂಕ ಮತ್ತು ವಾರ ನನಗೆ ಈಗ ನೆನಪಿಲ್ಲ. ಆರೋಪಿಯ ಕುಟುಂಬದ ಬಗ್ಗೆ ನನಗೆ ಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಈಗ ಮೆಕ್ಕೆಜೋಳದ ವ್ಯಾಪಾರವನ್ನು ಮಾಡುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ . ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

ಆರೋಪಿಗೆ ಹಣವನ್ನು ನೀಡಿದ್ದೇನೆ ಎಂದು ಹೇಳುವ ದಿನಾಂಕದಂದು ನನ್ನ ಬಳಿ 8,00,000 ರೂ ಹಣ ಇದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಅದಂತಹ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಕರಾರು ಪತ್ರ ಆಗಿರುವುದಿಲ್ಲ. ನಾನು ಫಿರ್ಯಾದಿಯಲ್ಲಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಆರೋಪಿಗೆ 8,00,000 ರೂ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಬರೆದಿರುವ ಬರವಣಿಗೆಯನ್ನು ನಾನೇ ಸ್ವತಃ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಹೆಸರು ಎ. ಸಿದ್ದನಗೌಡ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಎಷ್ಟನೇ ತರಗತಿಯವರೆಗೆ ವ್ಯಾಸಂಗ ಮಾಡಿದರೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು 8,00,000 ರೂ ಹಣವನ್ನು ಆರೋಪಿಗೆ ಯರಗನಾಳ್ ಗ್ರಾಮದಲ್ಲಿ ಇರುವ ನನ್ನ ಸಂಬಂಧಿಕರ ಮನೆಯಲ್ಲಿ ಕೊಟ್ಟಿರುತ್ತೇನೆ. ಸದರಿ ವಿಚಾರವನ್ನು ನಾನು ಫಿರ್ಯಾದಿಯಲ್ಲಿ ಮತ್ತು

ನನ್ನ ವಕೀಲರ ಮೂಲಕ ಆರೋಪಿಗೆ ನೀಡಿದ ನೋಟೀಸ್ ನಲ್ಲಿ ತಿಳಿಸಿರುವುದಿಲ್ಲ. ನೋಟೀಸನ್ನು ನೀಡಲು ವಕೀಲರಿಗೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ಆರೋಪಿಯು ತನ್ನ ವಕೀಲರ ಮೂಲಕ ನಮ್ಮ ವಕೀಲರಿಗೆ ನೀಡಿದ ಪ್ರತ್ಯುತ್ತರ ನೋಟೀಸ್ ನ್ನು ಓದಿ ತಿಳಿದುಕೊಂಡಿರುವುದಿಲ್ಲ. ಆರೋಪಿಯು ಪ್ರತ್ಯುತ್ತರ ನೋಟೀಸ್ ನ್ನು ನೀಡಿದ ಬಳಿಕ ನಾನು ಮತ್ತೊಂದು ನೋಟೀಸ್ ನ್ನು ಆರೋಪಿಗೆ ನೀಡಿರುವುದಿಲ್ಲ. ನಿಪಿ-1 ರಲ್ಲಿ ಇರುವ ಬರೆದಿರುವ ದಿನಾಂಕ, ಮೊತ್ತ ಮತ್ತು ಸಹಿ ಬೇರೆ ಬೇರೆ ಆಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ನನಗೆ ಗೊತ್ತಿರುವುದಿಲ್ಲ ಆರೋಪಿಯು ಬರೆದುಕೊಟ್ಟಿದ್ದಾರೆ ಎಂದು ಉತ್ತರಿಸಿರುತ್ತಾರೆ. ನಿಪಿ-1 ರಲ್ಲಿನ ಒಕ್ಕಣೆಗಳನ್ನು ಆರೋಪಿಯು ನನ್ನ ಸಮಕ್ಷಮ ಬರೆದಿರುವುದಿಲ್ಲ. ಖಾಲಿ ಚೆಕ್ ನ್ನು ನಾನು ಬರೆದುಕೊಂಡು ಫಿರ್ಯಾದನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿಃ 31-08-2019 ರಂದು ಆರೋಪಿಯು ಮನೆಗೆ ರೇಷನ್ ತರಲು ಹೊನ್ನಾಳಿಗೆ ಬಂದಿದ್ದು , ರೇಷನ್ ತೆಗೆದುಕೊಂಡು ವಾಪಾಸ್ಸು ಬೆಳಗುತ್ತಿಗೆ ಹೋಗಲು ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದಾಗ, ಆಕಸ್ಮಿಕವಾಗಿ ಆರೋಪಿಗೆ ಸೇರಿದ ಬೆಳಗುತ್ತಿ ಶಾಖೆಯ ಕರ್ನಾಟಕ ಬ್ಯಾಂಕ್ ನ ಚೆಕ್ ನಂ.182312 ಮತ್ತು 182313 ಎಂಬ ನಂಬರ್ ನ ಎರಡು ಚೆಕ್ ಗಳು ಕಳೆದುಹೋಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಕಳೆದು ಹೋದ ಚೆಕ್ ಗಳನ್ನು ಎಲ್ಲ ಕಡೆ ಹುಡುಕಿದರೂ ಸಹ ಅವುಗಳು ಸಿಗದೇ ಇದುದ್ದರಿಂದ ದಿಃ 03-09-2019 ರಂದು ಬೆಳಗುತ್ತಿ ಶಾಖೆಯ ಕರ್ನಾಟಕ ಬ್ಯಾಂಕ್ ನ ವ್ಯವಸ್ಥಾಕರಿಗೆ ಅರ್ಜಿಯನ್ನು ಕೊಟ್ಟು ಕಳೆದುಹೋದ ಚೆಕ್ ಗಳನ್ನು ಮಾನ್ಯ ಮಾಡದಂತೆ ಹಾಗೂ ಅವುಗಳನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದರೆ ತಡೆಹಿಡಿಯುವಂತೆ ಕೋರಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 05-09-2019 ರಂದು ಆರೋಪಿಯು ಚೆಕ್ ಗಳು ಕಳೆದು ಹೋದ ಬಗ್ಗೆ ದೂರನ್ನು ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಆರೋಪಿಯು ನನಗೆ ನಿಪಿ-1 ರ ಚೆಕ್ ನ್ನು ದಿಃ 11-09-2019 ರಂದು ನೀಡಿರುತ್ತಾರೆ. ಆರೋಪಿಯ ಕಳೆದು ಹೋಗಿರುವ ಚೆಕ್ ಗಳ ಪೈಕಿ ನಿಪಿ-1 ಸಹ ಒಂದು ಚೆಕ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ವಕೀಲರ ಮೂಲಕ ಆರೋಪಿಗೆ ನೋಟೀಸನ್ನು ನೀಡಿದ ಬಳಿಕ ಕಳುವಾಗಿರುವ ತನ್ನ ಚೆಕ್ ನನ್ನ ಬಳಿ ಇರುವುದಾಗಿ ಆರೋಪಿಗೆ ಗೊತ್ತಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬಳಿಕ ಆರೋಪಿಯು ನಮ್ಮ ಮನೆಗೆ ಬಂದು ಚೆಕ್ ನ್ನು ಹಿಂತಿರುಗಿಸುವಂತೆ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಇರುವ ಸಹಿ ಆರೋಪಿಯದಲ್ಲ ಎಂದರೆ ಸರಿಯಲ್ಲ. ಆರೋಪಿಯು ನಿಪಿ-1 ದಾಖಲಗೆ ನನ್ನ ಸಮಕ್ಷಮ ಸಹಿಯನ್ನು ಮಾಡಿರುವುದಿಲ್ಲ. ಆರೋಪಿಯ ಹೆಸರು ಎ. ಸಿದ್ದನಗೌಡ ಎಂಬುದಾಗಿದ್ದು, ಆತನು ತನ್ನ ಸಹಿಯನ್ನು ಸಹ ಎ. ಸಿದ್ದನಗೌಡ ಎಂದು ಮಾಡುತ್ತಾರೆ ಎಂದರೆ ನನಗೆ

ಗೊತ್ತಿಲ್ಲ. ಆರೋಪಿಯಿಂದ ಹಣವನ್ನು ಕಬಳಿಸುವ ಉದ್ದೇಶದಿಂದ ಆತನ ಕಳುವಾಗಿರುವ ಚೆಕ್ ನ್ನು ಉಪಯೋಗಿಸಿಕೊಂಡು ಅದರಲ್ಲಿನ ಒಕ್ಕಣೆಗಳನ್ನು ನಾನೇ ಬರೆದು ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿನ ಆರೋಪಿಯ ಸಹಿಯನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆದುದ್ದರಿಂದ ಆರೋಪಿಯು ನನಗೆ 8,00,000 ರೂ ಹಣವನ್ನು ನೀಡಲು ಬಾಧ್ಯರಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ರೀತಿಯ ಅಪರಾಧವನ್ನು ಎಸಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಹೆಚ್ಚಿನ ಹಣವನ್ನು ಪಡೆಯಬೇಕೆಂಬ ಆಸೆಯಿಂದ ಸುಳ್ಳು ಫಿರ್ಯಾದನ್ನು ದಾಖಲಿಸಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**